**ದಿನಾಂಕ: 13.09.2024 ರಂದು ಸಾಕ್ಷಿಧಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**:ಪಾಟೀ ಸವಾಲುಃ ವಾದಿ ಪರ ಶ್ರೀ.ಶ್ರೀ ಆರ್ ಎಸ್ ಟಿ ವಕೀಲರಿಂದ :**

ನನ್ನ ತಂದಗೆ ಇಬ್ಬರು ಹೆಣ್ಣು ಮಕ್ಕಳು 3 ಜನ ಗಂಡು ಮಕ್ಕಳಿದ್ದಾರೆ. ಅವರುಗಳೆಂದರೆ ಗುಲ್ಜಾರಾಬಾನು, ದಸ್ತಗಿರಸಾಬ, ಜೈಬುದ್ದೀನ್, ಚಾಂದಬೀಬಿ, ಅತ್ತರಬಾನು ಅವರುಗಳಾಗಿರುತ್ತಾರೆ. ಇವರುಗಳನ್ನು ಹೊರತುಪಡಿಸಿ ಬೇರೆ ಯಾರು ವಾರಸುದಾರರು ಇರುವುದಿಲ್ಲ. ದಾವಾ ಆಸ್ತಿಗಳ ಸರ್ವೆ ನಂ.49/1 ರಲ್ಲಿ ವಿಸ್ತೀರ್ಣ 6 ಎಕರೆ 6 ಗುಂಟೆ ಇರುತ್ತದೆ. ಸರ್ವೆ ನಂ.92/4 ರ ಆಸ್ತಿ ನನ್ನ ತಾಯಿಗೆ ಅವರ ತವರುಮನೆಯಿಂದ ಬಂದಂತಹ ಆಸ್ತಿಯಾಗಿರುತ್ತದೆ. ಅದೇ ರೀತಿ ವ್ಹಿಪಿಸಿ ನಂ.241 ರ ಆಸ್ತಿ ನನ್ನ ತಂದೆಗ ಸೇರಿದ ಆಸ್ತಿಯಾಗಿರುತ್ತದೆ. ಅದೇ ರೀತಿ ವ್ಹಿಪಿಸಿ ನಂ.171 ರ ಆಸ್ತಿ ನನ್ನ ತಾಯಿ ಹೆಸರಿನಲ್ಲಿರುತ್ತದೆ. ಸರಕಾರದಿಂದ ಸಿಗುವ ಸೌಲಭ್ಯಗಳನ್ನು ಪಡೆಯುವ ಉದ್ದೇಶದಿಂದ ನನ್ನ ಅಣ್ಣ ದಸ್ತಗಿರಸಾಬನ ಹೆಸರಿನಲ್ಲಿ ಮಾಡಿಕೊಳ್ಳಲಾಗಿತ್ತು ಎಂದರೆ ಸರಿ. ಅದೇ ರೀತಿ ಸರಕಾರದಿಂದ ಸಿಗುವ ಸೌಲಭ್ಯಗಳನ್ನು ಪಡೆಯುವ ಉದ್ದೇಶದಿಂದ ನಮ್ಮ ಕುಟುಂಬದ ಜಮೀನುಗಳನ್ನು ಸಹ ನನ್ನ ಮತ್ತು ನನ್ನ ಅಣ್ಣನ ಹೆಸರಿಗೆ ಮಾಡಿಕೊಳ್ಳಲಾಗಿತ್ತು ಎಂದರೆ ಸರಿ. ನನ್ನ ತಂದೆ ಬದುಕಿದ್ದಾಗ ಹಾಗೂ ಅವರು ಮೃತಪಟ್ಟ ನಂತರವು ಸಹ ನಾನು, ನನ್ನ ಅಕ್ಕ-ತಂಗಿಯರು ಮತ್ತು ನನ್ನ ಸಹೋದರರು ದಾವಾ ಆಸ್ತಿಗಳಲ್ಲಿ ಬೆಳೆದ ಬೆಳೆಗಳನ್ನು ಪರಸ್ಪರ ಹಂಚಿಕೊಳ್ಳುತ್ತಿದ್ದೆವು ಎಂದರೆ ಸರಿ. ಅದೇ ರೀತಿ ನನ್ನ ಅಕ್ಕ-ತಂಗಿಯರು ಮದುವೆಯಾಗಿ ಅವರ ಗಂಡಂದಿರ ಮನೆಯಲ್ಲಿದ್ದ ಸಂದರ್ಭದಲ್ಲಿಯೂ ಸಹ ದಾವಾ ಆಸ್ತಿಗಳಲ್ಲಿ ಬೆಳೆದ ಉತ್ಪನ್ನಗಳನ್ನು ಸಹ ಅವರ ಗಂಡನ ಮನೆಗಳಿಗೂ ಕಳುಹಿಸುತ್ತಿದ್ದೆವು ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ಈಗಲೂ ಸಹ ನಾನಾಗಲೀ, ನನ್ನ ಅಣ್ಣ ತಮ್ಮಂದಿರ ನಡುವೆ ಹಿಸ್ಸೆ ದಿಸ್ಸೆ ಮಾಡಿಕೊಂಡಿಲ್ಲ. ಅದೇ ರೀತಿ ನನ್ನ ಅಣ್ಣ ಮೃತಪಟ್ಟ ನಂತರವು ಸಹ ನಮ್ಮ ಕುಟುಂಬದ ಆಸ್ತಿಗಳಲ್ಲಿ ಹಿಸ್ಸೆ ದಿಸ್ಸೆ ಮಾಡಿಕೊಂಡಿಲ್ಲ ಎಂದರೆ ಸರಿ.

ನನ್ನ ತಂದೆ ಗೌಸಮೋದಿನ ಸಾಬನವರು ದಿನಾಂಕಃ 16.05.2014 ರಂದು ಮೃತಪಟ್ಟಿರುತ್ತಾರೆ ಎಂದರೆ ಸರಿ. ಅದೇ ರೀತಿ ನನ್ನ ತಾಯಿ ದಿನಾಂಕಃ 01.09.2019 ರಂದು ಮೃತಪಟ್ಟಿರುತ್ತಾರೆ ಎಂದರೆ ಸರಿ. ಅದೇ ರೀತಿ ನನ್ನ ಅಣ್ಣ ದಿನಾಂಕಃ 08.09.2017 ರಂದು ಮೃತಪಟ್ಟಿರುತ್ತಾರೆ ಎಂದರೆ ಸರಿ. ನನ್ನ ತಾಯಿ ಸಾಯುವುದಕ್ಕಿಂತ ಮೊದಲೇ ನನ್ನ ಅಣ್ಣ ಮೃತಪಟ್ಟಿರುವುದರಿಂದ ನನ್ನ ತಾಯಿ ಹೆಸರಿನಲ್ಲಿರುವ ಆಸ್ತಿಗಳಲ್ಲಿ ನನ್ನ ಅಣ್ಣನಿಗೆ ಯಾವುದೇ ಆಸ್ತಿ

ಹೋಗುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ನನ್ನ ಅಕ್ಕ-ತಂಗಿಯರಿಗೂ ಸಹ ಕಾನೂನುಬದ್ಧ ಹಕ್ಕು ಇದೆ ಎಂದರೆ ಸರಿ.

: **ಮರುವಿಚಾರಣೆ** : **ಇಲ್ಲ**.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

**Sd/-**

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್

ಸಾಕ್ಷಿದಾರರ ಸಹಿ